# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>

**ಸಿ.ಸಿ. ಸಂಃ 504/2018,**

| | | |
|---|---|---|
| ಸಾಕ್ಷಿಯ ಹೆಸರುಃ | ಸದಾಶಿವ | ಫ್ರಾಸಾಃಃ 6 |
| ತಂದೆಯ ಹೆಸರುಃ | ನಂದಿ ಬಸಪ್ಪ | ಚಾಸಾಃಃ 6 |
| ವಯಸ್ಸುಃ | 59 ವರ್ಷ | ಪ್ರಮಾಣೀಕರಿಸಿದ ದಿಃ 24.12.2025 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಹಿಟ್ನಳ್ಳಿ ಗ್ರಾಮ, ಪಿರಿಯಾಪಟ್ಟಣ ತಾಃ | |

<u>ಮುಖ್ಯ ವಿಚಾರಣೆಃ ಸಸಅ ರಿಂದಃ</u>

1. ಮೃತ ಪಾಲಾಕ್ಷ ನನ್ನ ಅಣ್ಣ.
2. ದಿಃ 31.12.2017 ರಂದು ನನ್ನ ಅಣ್ಣ ಮೃತ ಪಾಲಕ್ಷ ರವರು ಬೆಟ್ಟದಪುರಕ್ಕೆ ಬೈಕಿನಲ್ಲಿ ಹೋಗಿ ವಾಪಸ್ ಸಂಜೆ 5 ಗಂಟೆ ಸಮಯದಲ್ಲಿ ಬರುವಾಗ ನಮ್ಮ ಊರಿನ ಬಸವೇಶ್ವರ ದೇವಸ್ಥಾನದ ಬಳಿ ಸರ್ಕಲ್ ಬಳಿ ನಮ್ಮ ಊರಿಗೆ ಬರಲು ತಿರುಗುವಾಗ, ಒಂದು ಕ್ಯಾಂಟರ್ ವಾಹನ ಅತೀವೇಗವಾಗಿ ಬಂದು ನನ್ನ ಅಣ್ಣನಿಗೆ ಡಿಕ್ಕಿಪಡಿಸಿರುತ್ತದೆ.
3. ನಂತರ ನನ್ನ ಅಣ್ಣನನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು, ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ 18 ದಿನ ಇದ್ದು ಆಸ್ಪತ್ರೆಯಲ್ಲಿ ನನ್ನ ಅಣ್ಣ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ. ಅಲ್ಲಿ ನನ್ನ ಸಮಕ್ಷಮ ನನ್ನ ಅಣ್ಣನು ಅಪಘಾತದಿಂದ ಆದ ಗಾಯಗಳಿಂದ ಮೃತಪಟ್ಟ ಬಗ್ಗೆ ವೈದ್ಯಕೀಯ ಪರೀಕ್ಷೆ ಮಾಡಿರುತ್ತಾರೆ.

<u>ಪಾಟೀ ಸವಾಲು ಆರೋಪಿ ವಕೀಲರಿಂದಃ</u>

1. ನಮ್ಮ ಊರಿನ ಗೇಟ್ ಗೆ ಹಾಗೂ ನಮ್ಮ ಮನೆಯ ನಡುವೆ ಸುಮಾರು 100 ಮೀಟರ್ ಅಂತರ ಇದೆ.

2. ಆರೋಪಿತ ಅಪಘಾತವಾದ ಸ್ಥಳದಲ್ಲಿ ನಾನು ಇದ್ದೆ. ಜಮೀನಿನಿಂದ ದನ ಹೊಡೆದುಕೊಂಡು ಮನೆಗೆ ಬರುತ್ತಿದ್ದೆ. ಸದರಿ ವಿಚಾರವನ್ನು ಪೊಲೀಸರಿಗೆ ಹೇಳಿಲ್ಲ.

3. ನೀವು ಕಣ್ಣಾರೆ ಆರೋಪಿತ ಅಪಘಾತ ನೋಡಿಲ್ಲ ಎಂದರೆ, ನೋಡಿದ್ದೇನೆ.

4. ಪಿರಿಯಾಪಟ್ಟಣ-ಬೆಟ್ಟದಪುರ ರಸ್ತೆಯಲ್ಲಿ ಹಲವಾರು ವಾಹನಗಳು ಓಡಾಡುತ್ತವೆ ಎಂದರೆ ಸರಿ.

5. ಅಪಘಾತ ಯಾರ ಅಜಾಗರೂಕತೆಯಿಂದ ಆಯಿತು ಎಂದು ನಿಮಗೆ ಗೊತ್ತಿಲ್ಲ ಎಂದರೆ, ಕ್ಯಾಂಟರ್ ವಾಹನದ ಚಾಲಕನಿಂದ ಆಗಿದೆ.

6. ನನ್ನ ಅಣ್ಣನ ಬಲಭಾಗಕ್ಕೆ ಕ್ಯಾಂಟರ್ ಡಿಕ್ಕಿಪಡಿಸಿರುತ್ತದೆ. ಸದರಿ ವಿಚಾರವನ್ನು ಪೊಲೀಸರಿಗೆ ಹೇಳಿಲ್ಲ.

7. ಆರೋಪಿತ ಅಪಘಾತವಾದ ದಿನ ನೀವು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

8. ನಿಮ್ಮ ಅಣ್ಣನ ಕುಟುಂಬದವರಿಗೆ ವಿಮಾ ಪರಿಹಾರದ ಹಣ ಪಡೆಯಲು ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

9. ಆರೋಪಿಯನ್ನು ನೀವು ಸ್ಥಳದಲ್ಲಿ ನೋಡಿಲ್ಲ ಎಂದರೆ ಸರಿ.

10. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ